From more job news visit : www.kpscvaani.com

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಹಾಸನ
ಆಯುಷ್ ಇಲಾಖೆ
ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಹೊಸಲೈನ್ ರಸ್ತೆ, ಹಾಸನ -573201,
ಇ-ಮೇಲ್ ವಿಳಾಸ: dao.hassan09@gmail.com ದೂರವಾಣಿ ಸಂ: 08172-272272

ಸಂಖ್ಯೆ: ಜಿಆಕಹಾ/36/ನ್ಯಾಮ್/2019-20 ದಿನಾಂಕ: 21-05-2020

ಕೇಂದ್ರ ಪುರಸ್ಕೃತ ಯೋಜನೆಯಡಿ ಗುತ್ತಿಗೆ ನೇಮಕಾತಿ ಅಧಿಸೂಚನೆ

ವಿಷಯ:- ಆಯುಷ್ಮಾನ್ ಭಾರತ್ ಯೋಜನೆಯಡಿಯಲ್ಲಿ ಅಭಿವೃದ್ಧಿ ಪಡಿಸಿರುವ ಆಯುರ್ವೇದ ಕ್ಷೇಮ ಕೇಂದ್ರ (Health and Wellness Center) ಗಳಿಗೆ ಯೋಗ ತರಬೇತಿದಾರರು (ಪಾರ್ಟ್ ಟೈಂ) ಮತ್ತು ಮಲ್ಟಿಪರ್ಪಸ್ ವರ್ಕರ್ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವ ಬಗ್ಗೆ.

ಉಲ್ಲೇಖ:- 1. ಆಯುಷ್ ನಿರ್ದೇಶನಾಲಯ ರವರ ಸುತ್ತೋಲೆ ಪತ್ರ ಸಂ: ಆಯುಷ್/07/ಐ.ಇ.ಸಿ(3)/2015-16 ದಿ: 21-08-2019.
2. ಆಯುಷ್ ನಿರ್ದೇಶನಾಲಯ ರವರ ಪತ್ರ ಸಂ: ಆಯುಷ್/136/ಐ.ಇ.ಸಿ(3)2018-19. ದಿ: 16-12-2019.
3. ಆಯುಷ್ ನಿರ್ದೇಶನಾಲಯ ರವರ ಅಧಿಕೃತ ಜ್ಞಾಪನ ಸಂ: ಆಯುಷ್/136/ಐ.ಇ.ಸಿ(3)2018-19. ದಿ: 20-02-2020.

****

ಜಿಲ್ಲಾ ಆಯುಷ್ ಕಛೇರಿ, ಹಾಸನ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳನ್ನು ಆಯುಷ್ಮಾನ್ ಭಾರತ್ ಯೋಜನೆಯಡಿ ಆಯುರ್ವೇದ ಕ್ಷೇಮ ಕೇಂದ್ರಗಳಾಗಿ ಅಭಿವೃದ್ಧಿಪಡಿಸಿರುತ್ತದೆ. ಅಭಿವೃದ್ಧಿಪಡಿಸಿರುವ ಆಯುರ್ವೇದ ಕ್ಷೇಮ ಕೇಂದ್ರಗಳಿಗೆ ಯೋಗ ತರಬೇತಿದಾರರು (ಪಾರ್ಟ್ ಟೈಂ) ಮತ್ತು ಮಲ್ಟಿಪರ್ಪಸ್ ವರ್ಕರ್ ಹುದ್ದೆಗಳನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ 11 ತಿಂಗಳ ಅವಧಿಗೆ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ದಿನಾಂಕ: 23-05-2020 ರಿಂದ ಅರ್ಜಿಗಳನ್ನು ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಹಾಸನ ಮತ್ತು ವೆಬ್‌ಸೈಟ್ ವಿಳಾಸ www.hassan.nic.in ಇಲ್ಲಿ ಪಡೆಯಬಹುದಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **22-06-2020 ರ ಸಂಜೆ** 4.30 ಗಂಟೆಯವರೆಗೆ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಭರ್ತಿ ಮಾಡಿದ ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಈ ಕಛೇರಿ ವಿಳಾಸಕ್ಕೆ ಸಲ್ಲಿಸಿದ್ದಲ್ಲಿ ಮಾತ್ರ ಪರಿಗಣಿಸಲಾಗುವುದು. ಷರತ್ತು & ನಿಬಂಧನೆಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಹಾಸನ ಇಲ್ಲಿ ಸಂಪರ್ಕಿಸುವುದು.

ಕ್ರ. ಸಂ	ಹುದ್ದೆಗಳ ಹೆಸರು	ಹುದ್ದೆಗಳು ಖಾಲಿ ಇರುವ ಸ್ಥಳ	ಹುದ್ದೆಗಳ ಸಂಖ್ಯೆ	ಮಿಸಲಾತಿ	ಸಂಚಿತ ವೇತನ ಮಾಹೆಯಾನ	ನೇಮಕಾತಿ ವಿಧಾನ	ಕನಿಷ್ಠ ವಿದ್ಯಾರ್ಹತೆ
1	ಯೋಗ ತರಬೇತಿದಾರರು ಪಾರ್ಟ್ ಟೈಂ	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಕುರಾದಹಳ್ಳಿ, ಅರಸೀಕೆರೆ ತಾ॥	01	-	ರೂ. 8000/-	Expression of Interest (EOI) for 11 Months.	1) 10th +2 Pass with Yoga Wellness Instructor Course Certificate by Yoga Certification Board. OR 2) 10+2 Pass with Yoga Training Experince thorugh
		ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಮೆಳಗೋಡು, ಹಾಸನ ತಾ॥	01	-	ರೂ. 8000/		
		ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಮಾವನೂರು, ಹೊಳೆನರಸೀಪುರ ತಾ॥	01	-	ರೂ. 8000/		

From more job news visit : www.kpscvaani.com

							reputed Institute / Organization. 3) Preference should be given to the local candidates.
2	ಮಲ್ಟಿಪರ್ಪಸ್ ಹೆಲ್ತ್ ವರ್ಕರ್ಸ್	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಕುರಾದಹಳ್ಳಿ, ಅರಸೀಕೆರೆ ತಾ॥	01	ಪರಿಶಿಷ್ಟ ಜಾತಿ ಇತರೆ	ರೂ. 10,300/-	11 ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಸಂಪೂರ್ಣ ತಾತ್ಕಾಲಿಕ	ಕನಿಷ್ಠ 10ನೇ ತರಗತಿ ವಿದ್ಯಾರ್ಹತೆ ಆರೋಗ್ಯ ಮತ್ತು ಆಯುಷ್ ಇಲಾಖೆಯ ಬಗ್ಗೆ ಸಾಮಾನ್ಯ ಜ್ಞಾನ ಹೊಂದಿರಬೇಕು.
		ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಮೆಳಗೋಡು, ಹಾಸನ ತಾ॥	01	ಸಾಮಾನ್ಯ ಇತರೆ	ರೂ. 10,300/-		
		ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಮಾವನೂರು, ಹೊಳೆನರಸೀಪುರ ತಾ॥	01	ಪರಿಶಿಷ್ಟ ಪಂಗಡ ಇತರೆ	ರೂ. 10,300/-		

ಅಭ್ಯರ್ಥಿಗಳಿಗೆ ವಿಶೇಷ ಸೂಚನೆ:

1. **ವಯೋಮಿತಿ** : ದಿನಾಂಕ: 22-06-2020 ಕ್ಕೆ ಎಲ್ಲಾ ವರ್ಗದವರು ಕನಿಷ್ಠ 18 ವರ್ಷ ಪೂರ್ಣಗೊಂಡಿರತಕ್ಕದ್ದು ಹಾಗೂ ಗರಿಷ್ಠ 45 ವರ್ಷ ಮೀರಿರಬಾರದು.
2. **ಜಾತಿ ಪ್ರಮಾಣ ಪತ್ರ:-**
   ಎ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ನಮೂನೆ-ಡಿ
   ಬಿ) ಪ್ರವರ್ಗ -1 ರ ಅಭ್ಯರ್ಥಿಗಳು ನಮೂನೆ-ಇ
   ಸಿ) ಪ್ರವರ್ಗ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳು ನಮೂನೆ-ಎಫ್
   ಮೇಲ್ಕಂಡ ಜಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕಕ್ಕೆ ಚಾಲ್ತಿಯಲ್ಲಿರುವಂತೆ ಸಂಬಂಧಿಸಿದ ತಹಶೀಲ್ದಾರರಿಂದ ಪಡೆದಿರಬೇಕು.
3. ಅರ್ಜಿಯಲ್ಲಿ ಭರ್ತಿ ಮಾಡಿರುವ ವಿದ್ಯಾರ್ಹತೆ/ಮೀಸಲಾತಿಯನ್ನು ಮಾತ್ರ ಪರಿಗಣಿಸಲಾಗುವುದು. ಹೆಚ್ಚಿನ ವಿದ್ಯಾರ್ಹತೆ ಅಥವಾ ತದನಂತರದ ಮೀಸಲಾತಿ ಪರಿಗಣನೆಗೆ ಅವಕಾಶವಿರುವುದಿಲ್ಲ.ಒಮ್ಮೆ ಸಲ್ಲಿಸಿದ ಅರ್ಜಿಯಲ್ಲಿ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ.
4. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸಿದಲ್ಲಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಒಂದೇ ಅರ್ಜಿಯಲ್ಲಿ ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಪಕ್ಷದಲ್ಲಿ ಅರ್ಜಿಗಳು ಸ್ವಯಂ ತಿರಸ್ಕೃತಗೊಳ್ಳಲಿದೆ.
5. ಅರ್ಜಿ ಸಲ್ಲಿಸುತ್ತಿರುವ ಹುದ್ದೆಯ ಹೆಸರನ್ನು ಲಕೋಟೆಯ ಮೇಲೆ ದಪ್ಪ ಅಕ್ಷರಗಳಲ್ಲಿ ನಮೂದಿಸುವುದು.
6. **ಜನ್ಮ ದಿನಾಂಕ ದೃಢೀಕರಣ ಪತ್ರ** (ಎಸ್.ಎಸ್.ಎಲ್.ಸಿ / ತತ್ಸಮಾನ ವಿದ್ಯಾರ್ಹತೆಯ ಅಂಕಪಟ್ಟಿ ಅಥವಾ ಶಾಲಾ ವರ್ಗಾವಣೆ ಪ್ರಮಾಣ ಪತ್ರ ಅಥವಾ ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತಭಾಗ (Extract of Cumulative Record)
7. ನಿಗಧಿಪಡಿಸಿ ಮೀಸಲಾತಿಯ ಅಭ್ಯರ್ಥಿಗಳು ದೊರೆಯದಿದ್ದ ಪಕ್ಷದಲ್ಲಿ ಈ ಹುದ್ದೆಗಳನ್ನು ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಪರಿವರ್ತಿಸಲು ನೇಮಕಾತಿ ಸಮಿತಿಯಿಂದ ಅನುಮೋದನೆ ಪಡೆದು ಭರ್ತಿ ಮಾಡಲು ಕ್ರಮವಹಿಸಲಾಗುವುದು.
8. ಮಾನ್ಯ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ ರವರ ಅಧ್ಯಕ್ಷತೆಯಲ್ಲಿ ಆಯ್ಕೆ ಪ್ರಕ್ರಿಯೆ ಮೂಲಕ ನೇಮಕಾತಿ ಮಾಡಲಾಗುವುದು. ಎಲ್ಲಾ ಹುದ್ದೆಗಳು ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕ ಹುದ್ದೆಗಳಾಗಿದ್ದು ನಿರ್ದೇಶನಾಲಯದ ಆದೇಶದ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
9. ಅರ್ಜಿಗಳನ್ನು ಪಡೆಯಲು ಯಾವುದೇ ಶುಲ್ಕವಿರುವುದಿಲ್ಲ.

From more job news visit : www.kpscvaani.com

ಆಯ್ಕೆ ಪ್ರಕ್ರಿಯೆ:

1. **ಯೋಗ ತರಬೇತಿದಾರರು ಪಾರ್ಟ್ ಟೈಂ:** 10+2 (ಪಿ.ಯು.ಸಿ ತತ್ಸಮಾನ) ಮೆರಿಟ್ ರನ್ವಯ ಆಯ್ಕೆ ಮಾಡಲಾಗುವುದು.
2. **ಮಲ್ಟಿಪರ್ಪಸ್ ಹೆಲ್ತ್ ವರ್ಕರ್ಸ್:** ಎಸ್.ಎಸ್.ಎಲ್.ಸಿ ಮೆರಿಟ್ ಮತ್ತು ಮೀಸಲಾತಿಯನ್ವಯ ಆಯ್ಕೆ ಮಾಡಲಾಗುವುದು.

ಸದಸ್ಯ ಕಾರ್ಯದರ್ಶಿಗಳು
ಜಿಲ್ಲಾ ಮಟ್ಟದ ಆಯುಷ್ ಆಸ್ಪತ್ರೆಗಳ ಆರೋಗ್ಯ ರಕ್ಷಾ ಸಮಿತಿ,
ಜಿಲ್ಲೆ/ಉಪಜಿಲ್ಲೆ ಮಟ್ಟದಲ್ಲಿ ಆಯುಷ್ ಆಸ್ಪತ್ರೆಗಳಿಗೆ
ಹೆಚ್ಚುವರಿ ಸಿಬ್ಬಂದಿ ನೇಮಕಾತಿ ಸಮಿತಿ, ಹಾಸನ.

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಹಾಸನ ಆಯುಷ್ ಇಲಾಖೆ

ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ ಹೊಸಲೈನ್ ರೋಡ್, ಹಾಸನ-573201

ದೂರವಾಣಿ ಸಂಖ್ಯೆ: 08172-272272

ಕೇಂದ್ರ ಪುರಸ್ಕೃತಯೋಜನೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಅರ್ಜಿ ನಮೂನೆ

ರವರಿಗೆ,

ಮಾನ್ಯ ಸದಸ್ಯ ಕಾರ್ಯದರ್ಶಿಗಳು/
ಜಿಲ್ಲಾ ಆಯುಷ್ ಅಧಿಕಾರಿಗಳು
ಹಾಸನ

Please affix recent passport size color photo.

Do not staple the photo

ಅರ್ಜಿ ಸಲ್ಲಿಸುತ್ತಿರುವ ಹುದ್ದೆಯ ಹೆಸರು : _____

1. ಅರ್ಜಿದಾರನ/ಳ ಪೂರ್ಣ ಹೆಸರು : _____

2. ತಂದೆ/ಪೋಷಕರ ಹೆಸರು : _____

3. ಖಾಯಂ ವಿಳಾಸ : _____

_____

_____

4. ಅಂಚೆ ವಿಳಾಸ : _____

_____

_____

5. ಸಂಪರ್ಕಿಸಬಹುದಾದ
ದೂರವಾಣಿ ಸಂಖ್ಯೆ : ಮೊಬೈಲ್ : _____

ಸ್ಥಿರ ದೂರವಾಣಿ : _____

6. ಇ-ಮೇಲ್ ವಿಳಾಸ : _____

7. ಲಿಂಗ :

ಪುರುಷ		ಮಹಿಳೆ	

8. ಜನ್ಮ ದಿನಾಂಕ (ದೃಢೀಕರಣ ಪತ್ರ ಲಗತ್ತಿಸುವುದು) :

9. ಮೀಸಲಾತಿಕೋರಿದ್ದಲ್ಲಿ :ಅನ್ವಯಿಸುವ ಬಾಕ್ಸ್‌ನಲ್ಲಿ (√) ಗುರುತು ಹಾಕಿ.
(ದೃಢೀಕರಣ ಪತ್ರ ಲಗತ್ತಿಸುವುದು)

ಪ. ಜಾ	ಪ. ಪಂ	ಸಾಮಾನ್ಯ

APPLICATION

10. ವಿದ್ಯಾರ್ಹತೆ :ಅಧಿಸೂಚನೆಯಲ್ಲಿ ನೀಡಿರುವಂತೆ.

ಕ್ರ. ಸಂ.	ವಿದ್ಯಾರ್ಹತೆ	ಒಟ್ಟು ಅಂಕಗಳು	ಗಳಿಸಿದ ಅಂಕಗಳು	ಶೇಕಡ
1.				
2.				
3.				

ಸೂಚನೆ:

- ಅರ್ಜಿಯೊಂದಿಗೆ ಸ್ವಯಂಧೃಡೀಕೃತ ವಿದ್ಯಾರ್ಹತೆ, ಮೀಸಲಾತಿ ಪ್ರಮಾಣ ಪತ್ರ (ಚಾಲ್ತಿಯಲ್ಲಿರುವ) ಹಾಗೂ ಅನುಭವದ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
- ಅರ್ಜಿ ಸಲ್ಲಿಸುತ್ತಿರುವ ಹುದ್ದೆಯ ಹೆಸರನ್ನು ಲಕೋಟೆಯ ಮೇಲೆ ದಪ್ಪ ಅಕ್ಷರಗಳಲ್ಲಿ ನಮೂದಿಸುವುದು.
- ಈ ಅರ್ಜಿಯೊಂದಿಗೆ ಪರಿಶೀಲನಾ ಪಟ್ಟಿಯನ್ನು (ಚೆಕ್ ಲಿಸ್ಟ್) ಭರ್ತಿ ಮಾಡಿ ಕಡ್ಡಾಯವಾಗಿ ಸಲ್ಲಿಸುವುದು.
- ಅಪೂರ್ಣ, ಹಾಗೂ ಈ ಅರ್ಜಿಯ ನಮೂನೆಯನ್ನು ಹೊರತುಪಡಿಸಿ ಇತರೆ ಯಾವುದೇ ಅರ್ಜಿಗಳನ್ನು ಸಲ್ಲಿಸಿದಲ್ಲಿ ಪ್ರಾರಂಭಿಕ ಹಂತದಲ್ಲಿಯೇ ತಿರಸ್ಕೃತಗೊಳಿಸಲಾಗುವುದು.
- ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ https://hassan.nic.in- ಇಲ್ಲಿ ಸಂಪರ್ಕಿಸುವುದು.

ಅಭ್ಯರ್ಥಿಯ ಘೋಷಣೆ :

ಈ ಪ್ರಕಟಣೆಯಲ್ಲಿ ನೀಡಿರುವ ಎಲ್ಲಾ ಸೂಚನೆಗಳನ್ನು ಜಾಗರೂಕತೆಯಿಂದ ಓದಿಕೊಂಡಿದ್ದು, ಅವುಗಳಿಗೆ ನಾನು ಬದ್ಧನಾಗಿರುತ್ತೇನೆ/ಳೆ. ನಾನು ಈ ಸದರಿ ಹುದ್ದೆಗೆ ನಿಗಧಿಪಡಿಸಲಾದ ವಿದ್ಯಾರ್ಹತೆ, ವಯೋಮಿತಿ ಮತ್ತು ಮೀಸಲಾತಿ ಇತ್ಯಾದಿ ಎಲ್ಲಾ ನಿಬಂಧನೆಗಳನ್ನು ಓದಿ ತಿಳಿದುಕೊಂಡಿರುತ್ತೇನೆಂದು ಹಾಗೂ ನಾನು ಈ ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಹೇಳಿಕೆ/ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಘೋಷಿಸುತ್ತೇನೆ. ಈ ಮೇಲೆ ತಿಳಿಸಿದ ಯಾವುದೇ ಮಾಹಿತಿಗಳು ಸರಿಯಾಗಿಲ್ಲವೆಂದು ಆಯ್ಕೆ ಪೂರ್ವದಲ್ಲಾಗಲೀ ಅಥವಾ ನಂತರವಾಗಲೀ ಕಂಡು ಬಂದಲ್ಲಿ ಸದಸ್ಯ ಕಾರ್ಯದರ್ಶಿಗಳು/ಜಿಲ್ಲಾ ಆಯುಷ್ ಅಧಿಕಾರಿಗಳು ಹಾಸನ ಇವರು ಕೈಗೊಳ್ಳುವ ಸೂಕ್ತ ಕಾನೂನು ಕ್ರಮಕ್ಕೆ ನಾನು ಬದ್ಧನಾಗಿರುತ್ತೇನೆ/ಳೆ.

ಸ್ಥಳ :

ಅರ್ಜಿದಾರನ/ಳ ಸಹಿ

ದಿನಾಂಕ :

APPLICATION

ಕರ್ನಾಟಕ ಕರ್ನಾಟಕ ಸರ್ಕಾರ ಸರ್ಕಾರ

ಜಿಲ್ಲಾ ಪಂಚಾಯತ್, ಹಾಸನ ಆಯುಷ್ ಇಲಾಖೆ

ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ ಹೊಸಲೈನ್ ರೋಡ್, ಹಾಸನ-573201

ದೂರವಾಣಿ ಸಂಖ್ಯೆ: 08172-272272

ಪರಿಶೀಲನಾ ಪಟ್ಟಿ(Check List)

ಕ್ರ. ಸಂ.	ವಿವರ	ಅಭ್ಯರ್ಥಿಗಳು ಭರ್ತಿ ಮಾಡತಕ್ಕದ್ದು	ಕಛೇರಿ ಉಪಯೋಗಕ್ಕೆ	
		ಹೌದು/ ಇಲ್ಲ	ಹೌದು/ ಇಲ್ಲ	ಷರಾ
1.	ಅರ್ಜಿಯನ್ನು ಸಂಪೂರ್ಣವಾಗಿ ತುಂಬಲಾಗಿದೆ			
2.	ಭಾವಚಿತ್ರವನ್ನು ಅಂಟಿಸಲಾಗಿದೆ			
3.	ಎಸ್.ಎಸ್.ಎಲ್.ಸಿ ಅಂಕಪಟ್ಟಿ ಪ್ರತಿ ಲಗತ್ತಿಸಿದೆ			
4.	ಅಧಿಸೂಚನೆಯಲ್ಲಿ ನೀಡಿರುವ ವಿದ್ಯಾರ್ಹತೆಯ ಅಂಕಪಟ್ಟಿ ಪ್ರತಿಗಳನ್ನು ಲಗತ್ತಿಸಿದೆ			
5.	ಜಾತಿ ಮತ್ತುಆದಾಯ ಪ್ರಮಾಣ ಪತ್ರ ಲಗತ್ತಿಸಿದೆ (ನಿಮಗೆ ಅನ್ವಯಿಸುವುದಾದರೆ)			
6.	ಇ-ಮೇಲ್ ವಿಳಾಸ ನಮೂದಿಸಿದೆ			

ಅಭ್ಯರ್ಥಿಯ ಸಹಿ

ಅರ್ಜಿಯನ್ನು ತೆಗೆದುಕೊಂಡವರ ಹೆಸರು:

ಅರ್ಜಿಯನ್ನು ಪರಶೀಲಿಸಿದ ಅಧಿಕಾರಿಯ ಹೆಸರು:

ಸದಸ್ಯ ಕಾರ್ಯದರ್ಶಿಗಳು
ಜಿಲ್ಲಾ ಮಟ್ಟದಆಯುಷ್ ಆಸ್ಪತ್ರೆಗಳ ಆರೋಗ್ಯರಕ್ಷಾ ಸಮಿತಿ,
ಜಿಲ್ಲೆ/ಉಪಜಿಲ್ಲೆ ಮಟ್ಟದಲ್ಲಿಆಯುಷ್ ಆಸ್ಪತ್ರೆಗಳಿಗೆ
ಹೆಚ್ಚುವರಿ ಸಿಬ್ಬಂದಿ ನೇಮಕಾತಿ ಸಮಿತಿ, ಹಾಸನ

APPLICATION